3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.539/2023**

ಪ್ರಾಸಾ 1

ಚಾಸಾ 1

| | |
|---|---|
| ಹೆಸರು | ಬೆಟ್ಟಸ್ವಾಮಿ |
| ತಂದೆಯ ಹೆಸರು | ಹ್ಯಾಮಯ್ಯ |
| ವಯಸ್ಸು | 28 ವರ್ಷ |
| ಉದ್ಯೋಗ | ಚಾಲಕರು |
| ವಾಸಸ್ಥಳ | ಚೌಡನಕುಪ್ಪೆ |

ಸಾಕ್ಷಿಯನ್ನು ದಿನಾಂಕ 17.03.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಗೈರುಹಾಜರಾಗಿದ್ದು ಅವರ ಗೈರು ಹಾಜರು ವಿನಾಯತಿ ಕೋರಿ ಅರ್ಜಿಯನ್ನು ಸಲ್ಲಿಸಲಾಗಿದ್ದು , ಆರೋಪಿಗಳ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ಗುರುತಿಸಿರುತ್ತಾರೆ. ನಾನು ಪರಿಶಿಷ್ಟ ಆದಿದ್ರಾವಿಡ ಜಾತಿಗೆ ಸೇರಿರುತ್ತೇನೆ. ಆರೋಪಿತರು ಒಕ್ಕಲಿಗ ಜಾತಿಗೆ ಸೇರಿರುತ್ತಾರೆ. ಅವರು ನಮ್ಮ ಗ್ರಾಮದವರು. 2022 ರಲ್ಲಿ 2 ನೇ ಆರೋಪಿ ಸೌಮ್ಯರವರು ನನ್ನ ಬಳಿ ಬಂದು 8 ಗ್ರಾಂ ತೂಕದ ಕಿವಿಯ ಮಾಟಿಯನ್ನು ಕೊಟ್ಟು ರೂ.22,000 ಹಣವನ್ನು ಹುಲಿಯೂರುದುರ್ಗದಲ್ಲಿ ಅಡವಿಟ್ಟು ತಂದುಕೊಡುವಂತೆ ಹೇಳಿರುತ್ತಾರೆ. ಅದರಂತೆ ನಾನು ಒಡವೆಯನ್ನು ಅಡವಿಟ್ಟು ರೂ.22,000 ಹಣ ತಂದು

2 ನೇ ಆರೋಪಿಗೆ ಕೊಟ್ಟಿರುತ್ತೇನೆ. ಆದರಲ್ಲಿ 2 ನೇ ಆರೋಪಿ ಕಡೆಯಿಂದ ನಾನು ರೂ.3,000 ಸಾಲ ಪಡೆದುಕೊಂಡಿರುತ್ತೇನೆ.

2) ದಿನಾಂಕ 11.06.2023 ರಂದು 2 ನೇ ಆರೋಪಿಯು ಬಂದು ಒಡವೆಯನ್ನು ಬಿಡಿಸಿಕೊಂಡು ಬಂದು ಕೊಡು ಎಂದು ಕೇಳಿರುತ್ತಾರೆ. ಆಗ ನಾನು ಹಣ ನನ್ನ ಬಳಿ ಇರುವುದಿಲ್ಲ , ನಾಳೆ ಹೋಗಿ ಬಿಡಿಸಿಕೊಂಡು ಬರುತ್ತೇನೆಂದು ಹೇಳಿರುತ್ತೇನೆ. ಆದರೆ 2 ನೇ ಆರೋಪಿಯು ನನಗೆ ಈಗಲೇ ಒಡವೆ ಬೇಕೇ ಬೇಕು ಎಂದು ಕೇಳಿರುತ್ತಾರೆ. ಆದರೆ ನಾನು ನಾಳೆ ಬೆಳಿಗ್ಗೆ ಬಿಡಿಸಿಕೊಂಡು ಬರುತ್ತೇನೆಂದು ಹೇಳಿದಾಗ 2 ನೇ ಆರೋಪಿಯೊಂದಿಗೆ ಬಂದಿದ್ದ ಅವರ ಗಂಡ 1 ನೇ ಆರೋಪಿ ಚೇತನ್ ರವರು ಅವರ ಕೈಯಲ್ಲಿದ್ದ ಅಂಗಡಿಯ ಬೀಗದ ಕೈ ನಿಂದ ನನ್ನ ಎಡಕಣ್ಣಿನ ಹುಬ್ಬಿಗೆ ಹೊಡೆದಿರುತ್ತಾನೆ. ನಂತರ 2 ನೇ ಆರೋಪಿಯು ಸ್ಥಳದಲ್ಲಿದ್ದ ದೊಣ್ಣೆಯನ್ನು ತೆಗೆದುಕೊಂಡು ನನ್ನ ಬಲಭುಜದ ಹಿಂಭಾಗಕ್ಕೆ ಹೊಡೆದಿರುತ್ತಾರೆ. ನಂತರ ಆರೋಪಿಗಳು ಬೀಗದ ಕೈ ಮತ್ತು ದೊಣ್ಣೆಯನ್ನು ಸ್ಥಳದಲ್ಲಿಯೇ ಬಿಸಾಕಿ ಹೋಗಿರುತ್ತಾರೆ. ನಂತರ ನಾನು ನನ್ನ ಸ್ನೇಹಿತ ಮಾದೇವ ರವರನ್ನು ಕರೆದುಕೊಂಡು ಹುಲಿಯೂರುದುರ್ಗ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಹುಲಿಯೂರುದುರ್ಗ ಪೋ.ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ಆದರೆ ಪೊಲೀಸರು ನಾಳೆ ಬಂದು ಇನ್ನೊಂದು ದೂರನ್ನು ಕೊಡಿ ಎಂದು ಹೇಳಿರುತ್ತಾರೆ. ಆದರಿಂದ ಮಾರನೇ ದಿನ ಹೋಗಿ ಮತ್ತೊಂದು ದೂರನ್ನು ನೀಡಿರುತ್ತೇನೆ. ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಗಲಾಟೆಯು ಚೌಡನಕುಪ್ಪೆಯಿಂದ ತಾವರೆಕೆರೆಗೆ ಹೋಗುವ ಸಾರ್ವಜನಿಕ ರಸ್ತೆಯಲ್ಲಿ ಆಗಿರುತ್ತದೆ.

3) ದಿನಾಂಕ 13.06.2023 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ಸ್ಥಳದಲ್ಲಿ ನಾನು ಹಾಜರಿದ್ದು ಸ್ಥಳವನ್ನು ತೋರಿಸಿರುತ್ತೇನೆ. ಸ್ಥಳದಲ್ಲಿ ನನ್ನೊಂದಿಗೆ ಚಾಸಾ.2 ಮತ್ತು 3 ರವರು ಇದ್ದರು. ಬೆಳಿಗ್ಗೆ 8.30 ರಿಂದ 9.30 ಗಂಟೆಯವರೆಗೆ ಪೊಲೀಸರು ಸ್ಥಳ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ. ಪಂಚನಾಮೆಯನ್ನು

ನಿಪಿ.2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.2(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ನಾನು ಪೊಲೀಸರಿಗೆ ಬೀಗದ ಕೈ ಮತ್ತು ದೊಣ್ಣೆಯನ್ನು ತೋರಿಸಿರುತ್ತೇನೆ, ಅವುಗಳನ್ನು ಪಂಚನಾಮೆ ಕಾಲದಲ್ಲಿ ವಶಕ್ಕೆ ತೆಗೆದುಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಬೀಗದ ಕೈ ಮತ್ತು ದೊಣ್ಣೆಯನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ಕಾಲದಲ್ಲಿ ಭಾವಚಿತ್ರವನ್ನು ತೆಗೆದುಕೊಂಡಿರುತ್ತಾರೆ. ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

4) ಘಟನೆಯನ್ನು ಚಾಸಾ.2 ಮತ್ತು 3 ರವರು ನೋಡಿರುತ್ತಾರೆ. ಪೊಲೀಸರು ನನ್ನನ್ನು ಕುಣಿಗಲ್ ನ ಡಿವೈಎಸ್‌ಪಿ ರವರ ಕಚೇರಿಗೆ ಕರೆಸಿದ್ದರು. ಅಲ್ಲಿ ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಈಗ ನನಗೆ ತೋರಿಸಿದ ಭಾವಚಿತ್ರದಲ್ಲಿ ನಾನು ಕಾಣುತ್ತೇನೆ. ಅದನ್ನು ನಿಪಿ.4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿರುವ ದೂರಿಗೆ ಮತುತ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

5) 2 ನೇ ಆರೋಪಿಯು ಗಲಾಟೆಯಾದ ದಿನ ನನಗೆ ಕೊಟ್ಟಿದ್ದ ರೂ.3,000 ಹಣವನ್ನು ಈಗಲೇ ಕೊಡು ಎಂದು ಕೇಳಿದ್ದರು ಎಂದರೆ ಸರಿ. ನನ್ನ ಜಾತಿಯ ಬಗ್ಗೆ ಆರೋಪಿತರಿಗೆ ಮುಂಚೆಯೇ ಗೊತ್ತಿತ್ತು ಎಂದರೆ ಸರಿ. ಆರೋಪಿತರು ನನಗೆ ಕಾಲುಗಳಿಂದ ತುಳಿದಿರುತ್ತಾರೆ ಎಂದರೆ ಸರಿ. ಆರೋಪಿತರು ನನ್ನ ಜಾತಿಯನ್ನು ಹಿಡಿದು ಬೈದಿರುತ್ತಾರೆ ಎಂದರೆ ಸರಿ. ಗಲಾಟೆಯು ರಾತ್ರಿ 10.30 ಗಂಟೆಗೆ ಆಗಿರುತ್ತದೆ ಎಂದರೆ ಸರಿ.

(ಆರೋಪಿತರ ಪರ ಶ್ರೀ.ಎಂ.ಎನ್ ವಕೀಲರು ಅವರ ಹಿರಿಯ ವಕೀಲರಾದ ಶ್ರೀ.ಪಿ.ಎಂ. ರವರು ಅವರ ತಂದೆಯ ಅನಾರೋಗ್ಯದ ನಿಮಿತ್ತ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುವುದಾಗಿ ಪಾಟೀಸವಾಲಿಗೆ ಕಾಲಾವಕಾಶವನ್ನು ಕೋರಿರುತ್ತಾರೆ. ಆದ್ದರಿಂದ ಪಾಟೀಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ

ಸಾಕ್ಷಿಯನ್ನು ದಿನಾಂಕ 02.07.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**<u>ಪಾಟೀಸವಾಲು: ಆರೋಪಿ ಪರ ಶ್ರೀ.ಪಿ.ಎಂ. ವಕೀಲರಿಂದಃ</u>**

6) ಆರೋಪಿತರು ಚೌಡನಕುಪ್ಪೆಯಲ್ಲಿ ತರಕಾರಿ ಅಂಗಡಿಯನ್ನು ಇಟ್ಟುಕೊಂಡಿದ್ದರು. ಈಗ ಆರೋಪಿತರು ತರಕಾರಿ ಅಂಗಡಿಯನ್ನು ಇಟ್ಟುಕೊಂಡಿದ್ದ ಕಟ್ಟಡವು ರಸ್ತೆ ಅಗಲೀಕರಣದಲ್ಲಿ ನೆಲಸಮಗೊಳಿಸಿರುತ್ತಾರೆ ಎಂದರೆ ಸರಿ. ಆ ಕಟ್ಟಡವು ಸಿದ್ದೋಜಿರಾವ್ ರವರಿಗೆ ಸೇರಿತ್ತು ಎಂದರೆ ಸರಿ. ಆರೋಪಿತರ ಬಳಿ ನಾನು ಕೆಲಸ ಮಾಡಿರುವುದಿಲ್ಲ. ನಾನು ಹುಲಿಯೂರುದುರ್ಗದಲ್ಲಿ ಒಡವೆಗಳನ್ನು ರೂ.22,000 ಕ್ಕೆ ಅಡ ಇಟ್ಟಿರುತ್ತೇನೆ. ಆರೋಪಿತರ ತರಕಾರಿ ಅಂಗಡಿಯಲ್ಲಿ ತುಂಬಾ ವರ್ಷಗಳಿಂದ ಕೆಲಸ ಮಾಡುತ್ತಿದ್ದರಿಂದ ಆರೋಪಿಗಳ ಬಳಿ ನಾನು ಸಾಲ ಕೇಳಿದ್ದು ಆಗ ಅವರು ಒಡವೆಯನ್ನು ಕೊಟ್ಟು ಅಡ ಇಟ್ಟು ಸಾಲ ಪಡೆದುಕೊಳ್ಳುವಂತೆ ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಒಡವೆಗಳನ್ನು ಅಡ ಇಡುವಾಗ ಆರೋಪಿತರ ಆಧಾರ್ ಕಾರ್ಡ್ ನ್ನು ತೆಗೆದುಕೊಂಡು ಹೋಗಿ ತೋರಿಸಿರುವುದಿಲ್ಲ. ಆರೋಪಿತರ ಹೆಸರಿನಲ್ಲಿ ಅಡ ಇಟ್ಟಿರುವುದಿಲ್ಲ. ನಾನು ಆರೋಪಿತರ ತರಕಾರಿ ಅಂಗಡಿಯಲ್ಲಿ ತುಂಬಾ ವರ್ಷಗಳಿಂದ ಕೆಲಸ ಮಾಡುತ್ತಿದ್ದರಿಂದ ಹಣದ ಸಂಕಷ್ಟ ಎಂದು ಕೇಳಿದ್ದರಿಂದ ಆರೋಪಿತರು ತಮ್ಮ ಒಡವೆಗಳನ್ನು ಕೊಟ್ಟು ಅಡ ಇಟ್ಟು ಸಾಲ ಪಡೆದುಕೊಳ್ಳುವಂತೆ ಹೇಳಿದರು ಎಂದರೆ ಸರಿಯಲ್ಲ.

7) ಒಡವೆಗಳನ್ನು ನಾನು ಈಗಲೂ ಸಹ ಬಿಡಿಸಿ ಆರೋಪಿತರಿಗೆ ಕೊಟ್ಟಿರುವುದಿಲ್ಲ. ನಾನು ರೂ.22,000 ಹಣವನ್ನು ಪಾವತಿ ಮಾಡಿ ಒಡವೆಗಳನ್ನು ಬಿಡಿಸಿಕೊಡುತ್ತೇನೆಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ . ಆರೋಪಿತರು ನನಗೆ ಎಷ್ಟು ಬಾರಿ ಕೇಳಿದರೂ ಸಹ ಅವರು ಒಡವೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

8) ಚಾಸಾ.2 ರವರು ಅಂಗಡಿಯನ್ನು ಬಿಟ್ಟುಕೊಡುವಂತೆ ಆರೋಪಿತರಿಗೆ ಕೇಳುತ್ತಿದ್ದು ಆ ಬಗ್ಗೆ ಪೋ.ಠಾಣೆಗೆ ದೂರನ್ನೂ ಸಹ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಆದ್ದರಿಂದ ಆರೋಪಿತರ ಮತ್ತು ಚಾಸಾ.2 ರವರ ನಡುವೆ ದ್ವೇಷ ಇದ್ದು ನಾನು ಮತ್ತು ಅವರು

ಸೇರಿಕೊಂಡು ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಹುಲಿಯೂರುದುರ್ಗ ಸರ್ಕಾರಿ ಆಸ್ಪತ್ರೆಗೆ ರಾತ್ರಿ 10.40 ಗಂಟೆಗೆ ಹೋಗಿರುತ್ತೇನೆ. ಆಸ್ಪತ್ರೆಯ ಹತ್ತಿರದಲ್ಲೇ ಪೋ.ಠಾಣೆ ಇರುತ್ತದೆ ಎಂದರೆ ಸಾಕ್ಷಿಯು ಅರ್ಧ ಕಿ.ಮೀಟರ್ ದೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಘಟನೆಯಾದ ದಿನ ರಾತ್ರಿಯೇ ನಾನು ದೂರನ್ನು ಕೊಟ್ಟಿರುತ್ತೇನೆ. ಆ ರೀತಿ ನಾನು ಅದೇ ದಿನ ರಾತ್ರಿ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

9) 1 ನೇ ಆರೋಪಿಯು ನಮ್ಮ ಊರಿನವರಲ್ಲ , ಹುಣಸೂರಿನವರು ಎಂದರೆ ಸರಿ. ಅವರ ಅಂಗಡಿಯಲ್ಲಿ ತುಂಬಾ ವ್ಯಾಪಾರ ಆಗುತ್ತಿತ್ತು ಎಂದರೆ ಸರಿ. ನಾನು ಮತ್ತು ಚಾಸಾ.2 ರವರು ಸೇರಿ ಚಾಸಾ.2 ರವರಿಗೆ ಅಗಡಿಯನ್ನು ಬಿಡಿಸಿಕೊಡಬೇಕೆಂದು ಗಲಾಟೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ 4 ರಸ್ತೆಗಳು ಸೇರುತ್ತವೆ ಎಂದರೆ ಸರಿ. ನಾನು ದೂರಿನಲ್ಲಿ ಚಾಸಾ.2 ಮತ್ತು 3 ರವರು ಗಲಾಟೆಯನ್ನು ನೋಡಿರುತ್ತಾರೆ ಎಂದು ಬರೆಸಿರುತ್ತೇನೆ, ಆದರೆ ಚಾಸಾ.4 ರಿಂದ 7 ರವರು ಗಲಾಟೆಯನ್ನು ನೋಡಿರುತ್ತಾರೆ ಎಂದು ನಾನು ಬರೆಸಿರುವುದಿಲ್ಲ. ಮು.ಮಾ.1 ಮತ್ತು 2 ಸ್ಥಳದಲ್ಲಿಯೇ ಇದ್ದವು. ದೂರನ್ನು ಕೊಟ್ಟ ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಘಟನಾ ಸ್ಥಳವು ತುಂಬಾ ಜನನಿಬಿಡ ಪ್ರದೇಶವಾಗಿದ್ದರಿಂದ ಸ್ಥಳದಲ್ಲಿ ಮು.ಮಾ.1 ಮತ್ತು 2 ಇರಲಿಲ್ಲ , ನಾನೇ ತಂದು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

10) ನಾನು ಪಂಚನಾಮಯನ್ನು ಓದಿರುವುದಿಲ್ಲ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಸಮಕೆಮ ಯಾವುದೇ ವಸ್ತುಗಳನ್ನು ಪೊಲೀಸರು ತೆಗೆದುಕೊಂಡಿಲ್ಲ ಮತ್ತು ಪಂಚನಾಮೆಗೆ ನನ್ನ ಸಹಿಯನ್ನು ಡಿವೈಎಸ್‌ಪಿ ರವರ ಕಚೇರಿಯಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪಂಚನಾಮೆಯನ್ನು ಓದಿ ಹೇಳಿರುವುದಿಲ್ಲ. ಹೆಚ್.ಎಂ.ರವಿಕುಮಾರ್ ರವರು ನಮ್ಮ ಗ್ರಾಮದವರು. ಅವರು ಗ್ರಾಮ ಪಂಚಾಯತಿ ಸದಸ್ಯರು ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯ ಆಗದಿದ್ದರೂ ಸಹ ರವಿಕುಮಾರ್ ರವರ ಮೂಲಕ ವೈದ್ಯರ ಮೇಲೆ ಪ್ರಭಾವ ಬೀರಿ

ಗಾ.ಪ್ರ.ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದಲ್ಲಿ ನಾನು ಮತ್ತೊಂದು ಪ್ರಕರಣದಲ್ಲಿ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿ. ನಾನು ಮತ್ತು ನನ್ನ ಸ್ನೇಹಿತ ಹುಲಿಯೂರುದುರ್ಗದ ಅಕ್ಕಪಕ್ಕ ಜಾಗಗಳಿಗೆ ಸಂಬಂಧಪಟ್ಟಂತೆ ದಾಖಲಾಗುವ ಸಿವಿಲ್ ಪ್ರರಣಗಳಿಗೆ ಸಂಬಂಧಿಸಿದಂತೆ ರಾಜೀ ಮಾಡಿಸಲು ದೂರನ್ನು ದಾಖಲು ಮಾಡಿಸುವ ಹವ್ಯಾಸ ನಮಗೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಬಟ್ಟೆಗಳ ಮೇಲೆ ಮಣ್ಣು ಬಿದ್ದಿತ್ತು , ಅದನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ನನ್ನ ಬಟ್ಟೆಗಳ ಮೇಲೆ ರಕ್ತದ ಕಲೆ ಬಿದ್ದಿತ್ತು , ಅವುಗಳನ್ನು ಮನೆಯಲ್ಲಿ ಇಟ್ಟಿರುತ್ತೇನೆ. ಪಂಚನಾಮೆ ಕಾಲದಲ್ಲಿ ಬಟ್ಟೆಗಳ ಮೇಲೆ ಬಿದ್ದಿರುವ ರಕ್ತದ ಕಲೆಯನ್ನು ಪೊಲೀಸರಿಗೆ ತೋರಿಸಿರುತ್ತೇನೆ. ನನ್ನ ಬಟ್ಟೆಗಳ ಮೇಲೆ ಯಾವುದೇ ರಕ್ತದ ಕಲೆ ಇರಲಿಲ್ಲವಾದ್ದರಿಂದ ಪೊಲೀಸರಿಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ಕೀ ಗೊಂಚಲನ್ನು ಆರೋಪಿತರು ಸ್ಥಳದಲ್ಲಿಯೇ ಬಿಸಾಕಿ ಹೋಗಿರುತ್ತಾರೆಂದು ನಾನು ದೂರಿನಲ್ಲಿ ಬರೆಸಿಲ್ಲ.

11) ಆರೋಪಿತರು ನನಗೆ ಕೊಟ್ಟಿದ್ದ ಒಡವೆಗಳನ್ನು ಬಿಡಿಸಿಕೊಡುವಂತೆ ಕೇಳಿದ್ದರಿಂದ ಅವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನಗೆ ಕೀ ಗೊಂಚಲಿನಿಂದ ನನ್ನ ಎಡಕಣ್ಣಿನ ಹುಬ್ಬಿಗೆ ಹೊಡೆದಿರುತ್ತಾನೆಂದು, 2 ನೇ ಆರೋಪಿಯು ದೊಣ್ಣೆಯಿಂದ ಬಲಗಣ್ಣಿಗೆ ಹೊಡೆದಿರುತ್ತಾನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಡವೆಗಳನ್ನು ನಾನು ಬೆಳಿಗ್ಗೆ ಬಿಡಿಸಿಕೊಡುತ್ತೇನೆಂದು ಆರೋಪಿತರಿಗೆ ಹೇಳಿದ್ದೆ ಎಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಒಡವೆಗಳನ್ನು ಬಿಡಿಸಿಕೊಡುವಂತೆ ತುಂಬಾ ಜನ ಇದ್ದಾಗ ಆರೋಪಿತರು ನನಗೆ ಕೇಳಿದ್ದರಿಂದ ಗ್ರಾಮದಲ್ಲಿ ನನ್ನ ಮರ್ಯಾದೆ ಹೋಗುತ್ತಿದೆ ಎಂದು ಅದರಿಂದ ತಪ್ಪಿಸಿಕೊಳ್ಳಲು ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

12) ನಾನು ಮದ್ದೂರು ಶಾಸಕರ ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಆ ಪ್ರಭಾವವನ್ನು ಬಳಸಿಕೊಂಡು ಸುಳ್ಳು ದೂರನ್ನು ಕೊಡಿಸಿ ಸುಳ್ಳು ಗಾ.ಪ್ರ.ಪತ್ರವನ್ನು

ಪಡೆದುಕೊಂಡು ಅಂತಿಮ ವರದಿಯನ್ನು ಸಲ್ಲಿಸಲು ಪ್ರಭಾವ ಬೀರಿಸಿರುತ್ತೇನೆ ಎಂದರೆ ಸರಿಯಲ್ಲ . 2 ನೇ ಆರೋಪಿಯು ನನಗೆ ರೂ.3,000 ಕೊಡುವಂತೆ ಕೇಳಿರುವುದಿಲ್ಲ , ಒಡವೆಗಳನ್ನು ಬಿಡಿಸಿಕೊಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಕಾಲಿನಿಂದ ತುಳಿದು, ಜಾತಿ ಹಿಡಿದು ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ ಇರುವುದರಿಂದ 2 ದಿನಗಳ ತಡವಾಗಿ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ . ಮು.ಮಾ.1 ಮತ್ತು 2 ಕ್ಕೂ ಹಾಗೂ ಆರೋಪಿತರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ